**ಸಿಮಿಸ್. ನಂಃ 162/2019**

**ಆರ್.ಡಬ್ಲ್ಯೂಃ 1**

**ದಿನಾಂಕ 03-10-2025 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಮುಖ್ಯ ವಿಚಾರಣೆ ಎದುರುದಾರರ ಪರ: ಶ್ರೀ.ಟಿ.ಜಿ ವಕೀಲರಿಂದಃ**

ಪಡಿತರ ಚೀಟಿಯನ್ನು ನಿಆರ್.1 ಎಂದು ಗುರುತಿಸಲಾಯಿತು.

**ಪಾಟೀ ಸವಾಲು ಅರ್ಜಿದಾರರ ಪರ: ಶ್ರೀ.ಕೆ.ಎನ್.ಎಸ್ ವಕೀಲರಿಂದಃ**

1. ನನ್ನ ಮತ್ತು 1 ನೇ ಅರ್ಜಿದಾರರ ವಿವಾಹವಾದ ಬಳಿಕ ಕೇವಲ ಒಂದು ತಿಂಗಳ ಕಾಲ 1 ನೇ ಅರ್ಜಿದಾರಳು ನನ್ನ ಮನೆಯಲ್ಲಿ ಇದ್ದರು. ನನ್ನ ಮತ್ತು 1 ನೇ ಅರ್ಜಿದಾರರ ವಿವಾಹವಾದ ಕಾಲಕ್ಕೆ 1 ನೇ ಅರ್ಜಿದಾರರ ತವರು ಮನೆಯವರು ನನಗೆ 1 ಲಕ್ಷ ರೂಪಾಯಿ ಹಣ ಹಾಗೂ 50 ಗ್ರಾಂ. ಚಿನ್ನವನ್ನು ವರದಕ್ಷಿಣೆ ರೂಪದಲ್ಲಿ ಕೊಟ್ಟಿದ್ದರು ಎಂದರೆ ಸರಿಯಲ್ಲ.

2. 2 ನೇ ಅರ್ಜಿದಾರ ನನ್ನ ಮತ್ತು 1 ನೇ ಅರ್ಜಿದಾರಳ ಮಗ ಎಂದರೆ ಸರಿ. ಸುಮಾರು 2 ವರ್ಷಗಳ ಕಾಲ ನೀವು ಅರ್ಜಿದಾರರನ್ನು ಚೆನ್ನಾಗಿ ನೋಡಿಕೊಂಡಿರುತ್ತೀರಿ ಎಂದು ಸೂಚಿಸಿದ ಪ್ರಶ್ನೆಗೆ ಸಾಕ್ಷಿಯು 1 ನೇ ಅರ್ಜಿದಾರಳು ನಮ್ಮ ವಿವಾಹವಾದ ಬಳಿಕ ಕೇವಲ ಒಂದು ತಿಂಗಳ ಕಾಲ ಮಾತ್ರ ನನ್ನ ಮನೆಯಲ್ಲಿ ಇದ್ದು, ಅದಾದನಂತರ 1 ನೇ ಅರ್ಜಿದಾರಳು ತನ್ನ ತವರು ಮನೆಯಲ್ಲಿಯೇ ಉಳಿದಿರುತ್ತಾರೆ. 1 ನೇ ಅರ್ಜಿದಾರರು ನಮ್ಮ ಮನೆಯಲ್ಲಿದ್ದಾಗ ಹೆಚ್ಚಿನ ವರದಕ್ಷಿಣೆಗೆ ನಾನು ಬೇಡಿಕೆಯನ್ನು ಇಟ್ಟು ಅವರಿಗೆ ಮಾನಸಿಕ ಮತ್ತು ದೈಹಿಕ ಕಿರುಕುಳವನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ನೀವು ಹೆಚ್ಚಿನ ವರದಕ್ಷಿಣೆಗೆ ಬೇಡಿಕೆಯನ್ನು ಇಟ್ಟು 1 ನೇ ಅರ್ಜಿದಾರರಿಗೆ ಮಾನಸಿಕ ಮತ್ತು ದೈಹಿಕ ಕಿರುಕುಳವನ್ನು ನೀಡಿದ ಕಾರಣ ಊರಿನಲ್ಲಿ ಹಿರಿಯರ ಸಮಕ್ಷಮ ನ್ಯಾಯ ಪಂಚಾಯಿತಿಕೆ ಆಗಿರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ನಾನು ಅರ್ಜಿದಾರರನ್ನು ನನ್ನ ಮನೆಗೆ ವಾಪಸ್ಸು ಕರೆದುಕೊಂಡು ಬರಲು ಹೋದಾಗ ಅರ್ಜಿದಾರರು ನನ್ನ ಮನೆಗೆ ಬರಲು ನಿರಾಕರಿಸಿದ ಕಾರಣ ಊರಿನಲ್ಲಿ ನ್ಯಾಯ ಪಂಚಾಯಿತಿಕೆ ಆಗಿರುತ್ತದೆ ಎಂದು ಸ್ವತಃ ನುಡಿದಿರುತ್ತಾರೆ.

3. 2018 ರಲ್ಲಿ ನೀವು ಹೆಚ್ಚಿನ ವರದಕ್ಷಿಣೆಗೆ ಬೇಡಿಕೆಯನ್ನು ಇಟ್ಟು 1 ನೇ ಅರ್ಜಿದಾರರಿಗೆ ಮಾನಸಿಕ ಮತ್ತು ದೈಹಿಕ ಕಿರುಕುಳವನ್ನು ನೀಡಿದ ಕಾರಣ 1 ನೇ

ಅರ್ಜಿದಾರರು ನಿಮ್ಮ ವಿರುದ್ಧ ಕ್ರಿಮಿನಲ್ ಮೊಕದ್ದಮೆಯನ್ನು ಹೂಡಿದ್ದು ಸದರಿ ಪ್ರಕರಣವು ಸಿ.ಸಿ. 796/2018 ರಂತೆ ಇದೆ ನ್ಯಾಯಾಲಯದಲ್ಲಿ ವಿಚಾರಣೆಗೆ ಬಾಕಿ ಇರುತ್ತದೆ ಎಂದರೆ ಸಾಕ್ಷಿಯು ನಾನು 1 ನೇ ಅರ್ಜಿದಾರರೊಂದಿಗೆ ಯಾವುದೇ ವರದಕ್ಷಿಣೆ ಬೇಡಿಕೆಯನ್ನು ಇಟ್ಟಿರುವುದಿಲ್ಲ ಹಾಗೂ ಅವರಿಗೆ ಮಾನಸಿಕ ಮತ್ತು ದೈಹಿಕ ಕಿರುಕುಳ ನೀಡಿರುವುದಿಲ್ಲ ಆದರೆ 1 ನೇ ಅರ್ಜಿದಾರರು ನನ್ನ ವಿರುದ್ದ ಸಿ.ಸಿ. 796/2018 ರ ಪ್ರಕರಣ ದಾಖಲಿಸಿರುವುದು ಹೌದು ಎಂದು ನುಡಿದಿರುತ್ತಾರೆ.

4. ನಾನು ಮತ್ತು ನನ್ನ ಕುಟುಂಬದವರು1 ನೇ ಅರ್ಜಿದಾರರಿಗೆ ಹಾಗೂ 1 ನೇ ಅರ್ಜಿದಾರರ ಕುಟುಂಬದವರಿಗೆ ಹೋಗಿ ವರದಕ್ಷಿಣೆ ಬೇಡಿಕೆ ಇಟ್ಟು ಹಲ್ಲೆ ಮಾಡಿರುತ್ತೇವೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು 1 ನೇ ಅರ್ಜಿದಾರಳು ಹಾಗೂ ಅವರ ಕುಟುಂಬದವರು ಬಂದು ನನಗೆ ಮತ್ತು ನನ್ನ ಕುಟುಂಬದವರಿಗೆ ಹಲ್ಲೆಯನ್ನು ಮಾಡಿ 1 ನೇ ಅರ್ಜಿದಾರಳು ನಮ್ಮ ವಿರುದ್ಧ ದೂರನ್ನು ದಾಖಲಿಸಿದ್ದು, ನಾವು ಸಹ ನಮಗೆ ಹಲ್ಲೆ ಮಾಡಿದ 1 ನೇ ಅರ್ಜಿದಾರಳ ಕುಟುಂದವರ ವಿರುದ್ದ ದೂರನ್ನು ದಾಖಲಿಸಿರುತ್ತೇವೆ ಎಂದು ಸ್ವತಃ ನುಡಿದಿರುತ್ತಾರೆ.

5. 1 ನೇ ಅರ್ಜಿದಾರರು ನನ್ನ ವಿರುದ್ದ ವರದಕ್ಷಿಣೆ ಕಿರುಕುಳ ಪ್ರಕರಣ ಹೂಡಿದ ನಂತರದಲ್ಲಿ ನಾನು ಅಕ್ಕಿಹೆಬ್ಬಾಳುವಿನ ಸೋಮನಹಳ್ಳಿ ಗ್ರಾಮದ ಆಶಾ ಎನ್ನುವ ಮಹಿಳೆಯ ಜೊತೆ ಎರಡನೇ ವಿವಾಹವಾಗಿರುತ್ತೇನೆ ಎಂದರೆ ಸರಿ. ನನ್ನ ಮತ್ತು ಸದರಿ ಆಶಾರವರ ವೈವಾಹಿಕ ಜೀವನದಿಂದ ನಮಗೆ ಹೇಮಂತ್ ಎನ್ನುವ ಮಗ ಜನಿಸಿರುತ್ತಾನೆ ಎಂದರೆ ಸರಿ. ನಾನು 1 ನೇ ಅರ್ಜಿದಾರರನ್ನು ವಿವಾಹವಾದ ಬಳಿಕ ನನ್ನ ತಂದೆಯ ಹೆಸರಿನಲ್ಲಿದ್ದ ಆಸ್ತಿಗಳನ್ನು ಮಾರಾಟ ಮಾಡಿದ್ದು, ಸದರಿ ಕ್ರಯ ಪತ್ರಗಳಲ್ಲಿ ನನ್ನ ಸಹಿ ಇದೆ. ನಾನು ಮತ್ತು ನನ್ನ ತಂದೆ ಸೇರಿ ಮಾರಾಟ ಮಾಡಿದ ಸದರಿ ಆಸ್ತಿಗಳು ನನ್ನ ತಾತನಿಂದ ಬಂದಿದ್ದ ಪಿತ್ರಾರ್ಜಿತ ಆಸ್ತಿಗಳು ಎಂದರೆ ಸರಿ.

**ಅರ್ಜಿದಾರರ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು, ಕಾಲಾವಕಾಶ ನೀಡಲಾಯಿತು.**

(ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು.)

**ಓ. ಹೇ. ಕೇ. ಸರಿ ಇದೆ.**

**1 ನೇ ಹೆಚ್ಚುವರಿ ಸಿವಿಲ್ ಮತ್ತು ಜೆಎಂಎಫ್‌ಸಿ ನ್ಯಾಯಾಧೀಶರು**
**ಕೆ.ಆರ್.ನಗರ**